**ಸಾಕ್ಷಿಯನ್ನು ಈ ದಿನಾಂಕಃವ30.1.2021 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರಿದ ಫಿರ್ಯಾದಿಯ ಪ್ರಮಾಣ ಪೂರ್ವಕ ಸ್ವಹೇಳಿಕೆಃ**

2. ಬ್ಯಾಂಕ್‌ನವರು ಶಾಪ್ ತೆಗೆದುಕೊಳ್ಳಿ ಎಂದು ಹೇಳಿದರು. ನಮ್ಮ ತಂದೆಯವರು ಅವರ ಆಸ್ತಿಯನ್ನು ಅಡವಿಟ್ಟು ನಾನು ಖರೀದಿಸಲು ಇಚ್ಚಿಸಿದ್ದ ಆಸ್ತಿಗೆ ಸಾಲ ತೆಗೆದುಕೊಂಡು ಖರೀದಿಸಲಾಗಿದೆ. ಬ್ಯಾಂಕ್‌ನವರು 8.3.2013 ರಂದು ರಿಜಿಸ್ಟರ್ಡ್ ಸೇಲ್ ಡೀಡ್ ಮಾಡಿದ್ದಾರೆ. ಬ್ಯಾಂಕ್‌ನವರಿಗೆ 19ಲಕ್ಷ ರೂ. ಪೂರ್ಣಪಾವತಿ ಮಾಡಿದ್ದೇವೆ. ಬ್ಯಾಂಕ್‌ನವರು ಹಣ ತೆಗೆದುಕೊಂಡು ಅಧಿತ್ವ ಕೊಟ್ಟಿಲ್ಲ. ಬ್ಯಾಂಕ್‌ನ ಸೆಕ್ರೆಟರಿಯಾದ ಆನಂದ್‌ರವರು ಸೇಲ್‌ಡೀಡ್‌ಗೆ ವಿಟ್‌ನೆಸ್ ಆಗಿದ್ದಾರೆ. 5-6ಬಾರಿ ಬ್ಯಾಂಕ್‌ನವರಿಗೆ ಪೊಷೆಸನ್ ಕೊಡಿ ಎಂದು ಅರ್ಜಿಯನ್ನು ಕೊಟ್ಟಿದ್ದೇವೆ. ಎ ಜಿ ಎಂ ಮೀಟಿಂಗ್‌ನಲ್ಲಿ ಪೊಷೆಸನ್ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಜಾಯಿಂಟ್ ರಿಜಿಸ್ಟ್ರರ್ ಆಫ್ ಕೊ.ಅ.ಸೊಸೈಟಿ ಇವರಲ್ಲಿ ಸಹ ಪೊಷೆಸನ್ ಕೊಡಿಸಿಕೊಡಿ ಎಂದು ದೂರು ಕೊಟ್ಟಿದ್ದೇವೆ. ಆರ್ ಬಿ ಐ ನಲ್ಲಿ ಸಹ ದೂರು ಕೊಟ್ಟಿದ್ದೇವೆ. ಪೊಲೀಸರಿಗೂ ಸಹ ದೂರು ಕೊಟ್ಟಿದ್ದೇವೆ. ಆದರೆ ಅವರು ಕೋರ್ಟ್‌ಗೆ ಹೋಗಿ ಎಂದು ಹೇಳಿದ್ದಾರೆ. ದಿ.1.12.2020 ರಂದು ಬ್ಯಾಂಕ್‌ಗೆ ಹೋಗಿದ್ದೇವೆ ಆಗ ಆನಂದ್ ನೀವು ಹೆಂಗಸರು ಏನೂ ಮಾಡಲು ಆಗುತ್ತದೆಯೋ ಮಾಡಿಕೊಳ್ಳಿ ಎಂದು ಹೇಳಿದರು. ಇದನ್ನು ಕೇಳಿ ನಮ್ಮ ತಂದೆಗೆ ಕಾರ್ಡಿಯಕ್ ಅರೆಸ್ಟ್ ಆಯಿತು ಮತ್ತು ಅವರು 12.12.2020 ರಂದು ಮರಣ ಹೊಂದಿದರು. ನಾವು ದುಡ್ಡು ಕೊಟ್ಟರೂ ನಮಗೆ ಬ್ಯಾಂಕ್‌ನವರು ಅಂಗಡಿಯನ್ನು ಕೊಡುತ್ತಿಲ್ಲ.

3. ನಾನು ಸೇಲ್ ಡೀಡ್‌ನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಸಿ.1 ಎಂದು ಗುರುತಿಸಲಾಯಿತು. ದಿ.6.10.2016, 9.1.2019, 2.2.2019, 13.1.2019, 9.9.2020 ರಂದು ಬ್ಯಾಂಕ್‌ಗೆ ನೀಡಿದ ಪತ್ರಗಳನ್ನು ಹಾಜರುಪಡಿಸಿದ್ದು , ಅವುಗಳನ್ನು ಕ್ರಮವಾಗಿ ನಿಸಿ.2 ರಿಂದ 6 ಎಂದು ಗುರುತಿಸಲಾಯಿತು. ದಿ.16.9.2018 ರ 89ನೇ ಸಭೆಯ ನಡವಳಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ.7 ಎಂದು ಗುರುತಿಸಲಾಯಿತು. ದಿ.22.9.2018 ರ 90ನೇ ಸಭೆಯ ನಡವಳಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ.8 ಎಂದು ಗುರುತಿಸಲಾಯಿತು. ದಿ.29.5.2017ರ ನೋಟಿಸನ್ನು ಹಾಜರುಪಡಿಸಿದ್ದು ಅದನ್ನು ನಿಸಿ.9 ಎಂದು ಗುರುತಿಸಲಾಯಿತು. ದಿ.20.2.2018 ರ ಆದೇಶವನ್ನು ಹಾಜರುಪಡಿಸಿದ್ದು ಅದನ್ನು ನಿಸಿ.10 ಎಂದು ಗುರುತಿಸಲಾಯಿತು. ದಿ.6.10.2020 ರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಸಿ.11 ಎಂದು ಗುರುತಿಸಲಾಯಿತು. ದಿ.3.4.2017 ರಂದು ಆರ್ ಬಿ ಐ ಗೆ ನೀಡಿದ ದೂರನ್ನು ಹಾಜರುಪಡಿಸಿದ್ದು ಅದನ್ನು ನಿಸಿ.12 ಎಂದು ಗುರುತಿಸಲಾಯಿತು. ನಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಸಿ.13 ಎಂದು ಗುರುತಿಸಲಾಯಿತು.

ನಾನು ಫಿರ್ಯಾದಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು